ಓ.ಎಸ್ ನಂ. 86/2018 ಡಿ.ಡಬ್ಲ್ಯೂ-4

ಸಾಕ್ಷಿಯನ್ನು ದಿನಾಂಕಃ 18.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್ ಕೆ ವಕೀಲರಿಂದಃ**

ಪ್ರತಿವಾದಿ 1 ರಾಜಮ್ಮ ರವರ ಗಂಡನಾದ ಎನ್ ನಾಗರಾಜು ರವರು ಹಿಂದೆ ಹೆಚ್ ಡಿ ಕೋಟೆ ಶಾಸಕರಾಗಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ಸದರಿ ನಾಗರಾಜು ರವರ ಮಗ 3 ನೇ ಪ್ರತಿವಾದಿ ರವರು ಸದರಿ ನಾಗರಾಜು ರವರ ಹಿರಿಯ ಮಗನ ಸೊಸೆಯಾಗಿರುತ್ತಾರೆ. 7 ನೇ ಪ್ರತಿವಾದಿ ರೇಣುಕಾ ಗೋಪಾಲಕೃಷ್ಣ ರವರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರಿಂದ 3 ರವರು ನನಗೆ 1987 ರಿಂದಲೂ ಪರಿಚಯವಿರುತ್ತಾರೆ. 1 ನೇ ಪ್ರತಿವಾದಿಯವರ ಗಂಡ ನಾಗರಾಜು ರವರ ಪರಿಚಯವು ಸಹ ಇರುತ್ತದೆ. ಸದರಿ ರವರು ಬದುಕಿದ್ದಾಗ ನಾನು ಮತ್ತು ಅವರು ವಿಶ್ವಾಸದಲ್ಲಿ ಇದ್ದೆವು.

ನಾನು ವಕೀಲನಾಗಿ ನೊಂದಾಯಿಸಿಕೊಂಡಿರುತ್ತೇನೆ ಆದರೆ ಎಲ್ಲಿಯು ವಕೀಲ ವೃತ್ತಿ ಮಾಡುತ್ತಿರುವುದಿಲ್ಲ. ನಾನು ಈಗ ಅಥಿತಿ ಉಪನ್ಯಾಸಕನಾಗಿ ಹೆಚ್ ಡಿ ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡುತ್ತಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಮಾಹಿತಿಗಳ ಬಗ್ಗೆ ತಿಳಿದಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ವಕೀಲರಾದ ತಾರಾನಥ್ ರವರು ತಯಾರಿಸಿರುತ್ತಾರೆ.

ನಿಡಿ 2 ದಾನಪತ್ರದಲ್ಲಿ ಉಲ್ಲೇಖಿಸಿರುವ ದಾಖಲಾತಿಗಳನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗರಾಜು ರವರು ಮತ್ತು ಸೋಀಂ ದೇವಿ ರವರ ಸಂಬಂಧಿಕರೇ ಎಂದರೆ ಸಾಕ್ಷಿಯು ಸಂಬಂಧಿಕರಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 2 ಅನ್ನು ಹೆಚ್ ಡಿ ಕೋಟೆಯ ಹಳೇ ತಾಲೂಕು ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ನಿಡಿ 2 ಅನ್ನು ತಯಾರಿಸುವಾಗ ನಾನು, ಮಾದಪ್ಪ ಆರ್ , ಖಾನ್ ಸಿಂಗ್, ಅಚ್ಯೂತ್ ರಾಜೇ ಅರಸ್ ಮತ್ತು ಸೋಀಂ ದೇವಿ ರವರು ಇದ್ದೆವು. ನಿಡಿ 2 ಅನ್ನು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ನೋಂದಣಿ ಕಾರ್ಯವನ್ನು ಮಾಡಲಾಗಿರುತ್ತದೆ. ಸದರಿ ದಿನ ನೋಂದಣಿಗೆ ಅವಶ್ಯಕತೆ ಇರುವ ನೋಂದಣಿ ಶುಂಕವನ್ನು ಯಾರು ತುಂಬಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿಡಿ 2 ರಲ್ಲಿ 5 ನೇ ಪ್ರತಿವಾದಿ ಸಿ ಎನ್ ನಾಗಣ್ಣ ಎಂಬುವರಿಗೆ ಆಧಾರ ಪತ್ರ ಆಗಿರುತ್ತದೆ ಎಂದು ಹೇಳಾಗಿರುತ್ತದೆ ಎಂದರೆ ಸಾಕ್ಷಿಯು ಹೇಳಲಾಗಿರುತ್ತದೆ

ಎಂದು ನುಡಿಯುತ್ತಾರೆ. ಆಧಾರ ಪತ್ರದ ಮೊತ್ತ ಎಷ್ಟು ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಉಲ್ಲೇಖಿಸಿರುವ ಆಧಾರ ಪತ್ರದ ಮೊತ್ತವನ್ನು ಯಾರು ತೀರಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ ಎಂದು ತಿಳಿದಿರುವುದಿಲ್ಲ. ನಿಡಿ 2 ರಲ್ಲಿ ಹೇಳಿರುವ ಆಧಾರ ಪತ್ರವನ್ನು ನಾನು ನೋಡಿರುವುದಿಲ್ಲ. ನಿಡಿ 2 ರಲ್ಲಿ ಸಹಿ ಮಾಡುವ ಸಮಯ ದಿನಾಕ 30.12.2003 ರಂದು 5 ನೇ ಪ್ರತಿವಾದಿಯವರು 4 ನೇ ಪ್ರತಿವಾದಿಯವರಿಂದ ದಾನ ಪತ್ರದಲ್ಲಿ ಉಲ್ಲೇಖಿಸಿರುವ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ನನಗೆ ತಿಳಿದಿರಲಿಲ್ಲ. ದಿನಾಂಕ 30.12.2003 ರಂದು ಸೋಙಂ ದೇವಿಯವರು ಪ್ರತಿವಾದಿ 5 ರವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದರಿಂದ ನಿಡಿ 2 ರಂತೆ ಎನ್ ನಾಗರಾಜು ರವರಿಗೆ ದಾನ ಪತ್ರ ಮಾಡಿಕೊಡುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ 2 ದಾನಪತ್ರ ನಾಮಕಾವಸ್ಥೆಯ ದಾಖಲಾತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸೋಙಂ ದೇವಿ, ಎನ್ ನಾಗರಾಜು ಮತ್ತು ನಾವೆಲ್ಲರೂ ಶಾರಿಕ್ಕಾಗಿ ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಸರಿಯಲ್ಲ. ನಿಡಿ 2 ರಂತೆ ದಾನ ಪತ್ರ ಆದ ದಿನಾಂಕದಂದು ಸದರಿ ಎನ್ ನಾಗರಾಜು ರವರಿಗೆ ಹಕ್ಕು ಮತ್ತು ಸ್ವಾಧೀನ ಅವರಿಗೆ ನಿಮ್ಮ ಪ್ರಕಾರ ವರ್ಗಾವಣೆ ಆಗಿರುತ್ತದೇಯೇ ಎಂದರೆ ಸಾಕ್ಷಿಯು ಆಗಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದ ಅವರಿಗೆ ಹಕ್ಕು ಮತ್ತು ಸ್ವಾಧೀನ ಹಿಂದೇಯೇ ಆಗಿತ್ತು ಎಂದು ನುಡಿಯುತ್ತಾರೆ. ದಿನಾಂಕ 25.12.2003 ರಂದೇ ಸದರಿ ನಾಗರಾಜು ರವರಿಗೆ ಹಕ್ಕು ಮತ್ತು ಸ್ವಾಧೀನ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 25.12.2003 ರಂದು ಆದ ದಾಖಾಲಾತಿಗೆ ನಾನು ಸಾಕ್ಷಿದಾರನಾಗಿರುವುದಿಲ್ಲ. ಈ ದಿನ ನ್ಯಾಯಾಲಯದಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎನ್ ನಾಗರಾಜು ರವರಿಗೂ ಈ ದಾವೆಯ ವಾದಿ ಪುಟ್ಟಸ್ವಾಮಿ ರವರ ಮಧ್ಯೆ ದಾವಾಸ್ತಿಗೆ ಸಂಬಂಧಿಸಿದಂತೆ ಖಾತೆಯ ವಿಚಾರದಲ್ಲಿ ತಕರಾರು ಇತ್ತು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ರವರು ದಿನಾಂಕ 03.09.2004 ರಲ್ಲಿ ದಾವಾಸ್ತಿಯನ್ನು ವಾದಿಯವರು ಖರೀದಿಸಿದ್ದು, ಸದರಿ ಖರೀದಿಸಿದ್ದ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಆಗದಂತೆ ಎನ್ ನಾಗರಜು ರವರು ತಕರಾರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 24.04.2006 ರಂದು ಜಿಲ್ಲಾಧಿಕಾರಿಗಳು

ಮೈಸೂರು ಜಿಲ್ಲ ಮೈಸೂರು ಇವರು ವಾದಿಯ ಹೆಸರಿನಲ್ಲಿ ದಾವಾಸ್ತಿಗೆ ಸಂಬಂದಿಸಿದಂತೆ ಖಾತೆ ಮಾಡಬಹುದು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರಂತೆ ವಾದಿ ರವರ ಹೆಸರಿಗೆ ಖಾತೆಯಾಗಿದ್ದರೂ ಸಹ ನಾನು ಸೋಲಂ ದೇವಿ ಎನ್ ನಾಗರಾಜು ರವರು ಸೇರಿ ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾನ ಪತ್ರ ಆಗುವ ದಿನದಂದು ಸೋಲಂ ದೇವಿ ರವರೇ ದಾವಾಸ್ತಿಯ ಮಾಲೀಕರಾಗಿದ್ದರು ಎಂದು ತಿಳಿಸುವ ದಾಖಲಾತಿಯನ್ನು ನಾನು ನೋಡಿರಲಿಲ್ಲ ಎಂದರೆ ಸರಿ.

**ಮರುವಿಚರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ